ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 10, 2020**

# ಪತ್ರಿಕಾ ಆಮಂತ್ರಣ

**ಕೋವಿಡ್–19ರ ಸೋಂಕು ನಿಯಂತ್ರಿಸಲು ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು/ಅಧಿಕಾರಿಗಳೊಂದಿಗೆ ಚರ್ಚೆ**

ಅಧ್ಯಕ್ಷತೆ: ವಿ.ಸೋಮಣ್ಣ.

ವಸತಿ ಸಚಿವರು ಹಾಗೂ ಕೋವಿಡ್ ಉಸ್ತುವಾರಿ ಸಚಿವರು ಬೆಂಗಳೂರು ಪೂರ್ವ ವಲಯ

ದಿನಾಂಕ: 13–07–2020, ಸೋಮವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರ ಕಛೇರಿ ಸಭಾಂಗಣ, ಮೆಯೋಹಾಲ್, ರೆಸಿಡೆನ್ಸಿ ರಸ್ತೆ, ಬೆಂಗಳೂರು.

## ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):

ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ (ಪ್ರೈ) ಲಿ., ಮೈಸೂರು ರವರು ಸಿ.ಎಸ್.ಆರ್.ಸ್ಕೀಮ್ ಅಡಿಯಲ್ಲಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಭಾರತೀಯ ಆನೆಗಳು, ಭಾರತೀಯ ಸಿಂಹ, ಹುಲಿ, ಜಿರಾಫೆಗಳು, ಝೀಬ್ರಾಗಳು, ಚಿಂಪಾಂಜಿ ಮತ್ತು ಬಿಳಿ ಘೇಂಡಾಮೃಗಗಳನ್ನು ದಿನಾಂಕ 09/07/2020 ರಿಂದ ಒಂದು ವರ್ಷದ ಅವಧಿಗೆ ರೂ. 10.00 ಲಕ್ಷ ಪಾವತಿಸಿ ದತ್ತು ಸ್ವೀಕರಿಸಿದ್ದಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# Eye gaze-controlled robotic arm for the speech and motor impaired

**Bengaluru, July 10 (Karnataka Information):** People with Severe Speech and Motor Impairment (SSMI) – a condition caused by disorders like cerebral palsy – find it difficult to physically operate devices such as a joystick, mouse or trackball, or use speech recognition systems. Eye gaze-controlled computer interfaces can help them perform various tasks on par with their non-disabled peers.

To help people with SSMI, a research team at the Centre for Product Design and Manufacturing (CPDM), Indian Institute of Science (IISc), has designed a robotic arm that can be manipulated by eye movement using a computer interface. This interface is non-invasive since it is through a webcam and a computer, unlike other eye gaze-tracking devices that use head-mounted systems.

The team worked with young adult students who have SSMI at Vidya Sagar (formerly The Spastics Society of India) in Chennai, an institution for individuals with disabilities. “Many of these students [with cerebral palsy] are not able to precisely focus at a single point in their visual field, due to uncontrolled gaze movement. They are also not comfortable to look at all portions of the visual field equally,” says project lead Pradipta Biswas, Assistant Professor at CPDM.

Biswas and his team used computer vision and machine learning algorithms to analyse live feeds of facial video from the users, and were able to estimate where the user was looking. They coupled this with an Augmented Reality application to allow the user to use a robotic arm for tasks like picking up and dropping objects, and placing them where they desire, as long as it was within reach of the robotic arm.

One of the main applications of this eye gaze-controlled robotic arm is rehabilitation of young adults with SSMI, through tasks such as fabric printing. They usually require assistance in doing such tasks, as they can only do a small part of it by themselves. Using the robotic arm designed by the researchers, people with SSMI can use their eye gaze to perform mechanical tasks that can help them work on handicrafts independently.

This eye gaze-controlled interface has been deployed at Vidya Sagar and is in regular use. “This validation and evaluation [of the interface and robotic arm] with end users is a major contribution of the study,” says Biswas. The students with SSMI are able to use the robotic

manipulator almost as well as their non-disabled counterparts, and the results were the same during repeated trials.

This technology can also be used by younger individuals with SSMI, to move toys like cars. “We are using play as a medium to teach new technologies, which they can use for the rest of their lives,” adds Biswas. Further modifications to this tool could also allow young individuals with SSMI to use it for e-learning.

The authors believe that this interface is a step towards designing future technologies which ensure that physical impairments do not stand in the way of pedagogical training and professional lives of individuals with SSMI. Biswas also says that such a system could be useful for automotive and aeronautical applications, as well as for developing collaborative robots used in smart manufacturing.

## ಸಚಿವರ ಪ್ರವಾಸ

ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):

ನಗರಾಭಿವೃದ್ಧಿ ಸಚಿವರಾದ ಬಿ.ಎ. ಬಸವರಾಜ ಅವರು ಜುಲೈ 13 ರಿಂದ 17 ರವರೆಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಜುಲೈ 17 ರಂದು ಕೇಂದ್ರ ಸ್ಥಾನಕ್ಕೆ ಹಿಂದಿರುಗುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೋವಿಡ್–19ರ ಸೋಂಕು ನಿಯಂತ್ರಣದ ಬಗ್ಗೆ ಚರ್ಚೆ

ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):

ಕೋವಿಡ್–19ರ ಸೋಂಕನ್ನು ಬೆಂಗಳೂರಿನಲ್ಲಿ ಪರಿಣಾಮಕಾರಿಯಾಗಿ ನಿಯಂತ್ರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪೂರ್ವ ವಲಯಕ್ಕೆ ವಸತಿ ಸಚಿವರನ್ನು ಉಸ್ತುವಾರಿಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ 13–07–2020ರ ಸೋಮವಾರ ಬೆಳಿಗ್ಗೆ 11:00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರ ಕಚೇರಿ ಸಭಾಂಗಣ, ಮೆಯೋಹಾಲ್, ರೆಸಿಡೆನ್ಸಿ ರಸ್ತೆ, ಬೆಂಗಳೂರು ಇಲ್ಲಿ ವಸತಿ ಸಚಿವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ

ಜನಪ್ರತಿನಿಧಿಗಳು/ಅಧಿಕಾರಿಗಳೊಂದಿಗೆ ಚರ್ಚಿಸಲು ಸಭೆಯನ್ನು ಕರೆಯಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ಕಾರ್ಯಾಚರಣೆ**

**ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):**

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು ನೆಹರು ಕಾಲೋನಿಯ ನಿವಾಸಿಯೊಬ್ಬರು ತಮ್ಮ ಮಹಿಳಾ ಸಂಬಂಧಿ ಮೈಸೂರಿನಲ್ಲಿ ವಾಸವಾಗಿದ್ದು, ಆಕೆಗೆ ಪರಿಚಯವಿರುವ ವ್ಯಕ್ತಿಯೊಬ್ಬರು ಮದುವೆಯಾಗುವುದಾಗಿ ನಂಬಿಸಿ, ಅವರನ್ನು ಲೈಂಗಿಕವಾಗಿ ಉಪಯೋಗಿಸಿ ಕೊಂಡು, ಆನಂತರ ಮೋಸ ಮಾಡಿದ್ದರಿಂದ ಸದರಿರವರು ಮೈಸೂರು ನಗರದ ಮೇಟಗಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಈ ವಿಚಾರದ ಕುರಿತಂತೆ ಸದರಿ ಮಹಿಳೆಯು ಪಿರ್ಯಾದುದಾರರಿಗೆ ತಮಗೆ ಮೋಸ ಮಾಡಿದ ವ್ಯಕ್ತಿ ಈಗಲೂ ಒಪ್ಪಿದರೆ ತಾನು ಅವರೊಡನೆ ಮದುವೆಯಾಗುವುದಾಗಿ, ಈ ಬಗ್ಗೆ ಆ ವ್ಯಕ್ತಿಯ ಅಥವಾ ಪೊಲೀಸರ ಸಹಾಯವನ್ನು ಪಡೆಯುವಂತೆ ತಿಳಿಸಿರುತ್ತಾರೆ.

ಅದರಂತೆ ಪಿರ್ಯಾದುದಾರರು ಮೇಟಗಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರಾದ ಶ್ರೀ. ಬಿ. ಜಿ. ರಾಘವೇಂದ್ರಗೌಡ ಮತ್ತು ಹೆಡ್‌ಕಾನ್ಸ್‌ಟೇಬಲ್ ಶ್ರೀ. ಭೀಮಣ್ಣ ಇವರುಗಳನ್ನು ದಿನಾಂಕಃ 04-07-2020 ರಂದು ಭೇಟಿ ಮಾಡಿ ವಿಚಾರ ಮಾಡಿದಾಗ, ಸದರಿರವರುಗಳಿಗೆ ಮದುವೆ ಮಾಡಿಸಲು ಅಥವಾ ಮೇಲ್ಕಂಡ ಪ್ರಕರಣವನ್ನು ಬಿಗಿ ಮಾಡಲು ಆರೋಪಿತರು 1,00,000/- ರೂ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದಿನಾಂಕಃ 07-07-2020 ರಂದು 75,000/- ರೂಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆಂದು ಹಾಗೂ ಸದರಿಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಇತ್ಯಾದಿಯಾಗಿ ಆರೋಪಿಸಿ ದಿನಾಂಕಃ 08-07-2020 ರಂದು ಪಿರ್ಯಾದಿಯವರು ದೂರು ನೀಡಿರುತ್ತಾರೆ.

ಈ ಬಗ್ಗೆ ಪ್ರಕರಣದ ಫಿರ್ಯಾದುದಾರರು ಲಂಚದ ಹಣವನ್ನು ನೀಡಲು ಇಷ್ಟವಿಲ್ಲದ ಕಾರಣ ಭ್ರಷ್ಟಾಚಾರ ನಿಗ್ರಹ ದಳ ಮೈಸೂರು ಜಿಲ್ಲಾ ಠಾಣೆಗೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ಈ ದೂರಿನನ್ವಯ ದಿನಾಂಕ: 08.07.2020 ರಂದು ನಡೆಸಿದ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಶ್ರೀ ಬಿ. ಜಿ. ರಾಘವೇಂದ್ರ ಗೌಡ, ಪೊಲೀಸ್ ನಿರೀಕ್ಷಕರು ಮತ್ತು ಶ್ರೀ ಭೀಮಣ್ಣ, ಸಿ.ಹೆಚ್.ಸಿ-50, ಇಬ್ಬರೂ ಮೇಟಗಳ್ಳಿ ಪೊಲೀಸ್ ಠಾಣೆ, ಮೈಸೂರು ನಗರ ರವರುಗಳು ರೂ. 75,000/- ಲಂಚದ ಹಣವನ್ನು

ಕೆ.ಆರ್.ಎಸ್ ಜಂಕ್ಷನ್‌ನ ಬಳಿ ರಿಂಗ್‌ರೋಡ್‌ನಲ್ಲಿರುವ ಅಕ್ಷಯ ಪ್ಯಾಲೇಸ್ ಇನ್ ಲಾಡ್ಜ್‌ನಲ್ಲಿ ಪಿರ್ಯಾದುದಾರರಿಂದ ಪಡೆದುಕೊಂಡಿದ್ದು, ಮೈಸೂರು, ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಲಂಚದ ಹಣದ ಸಮೇತ ಆರೋಪಿತನನ್ನು ವಶಕ್ಕೆ ಪಡೆದು, ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಂಡು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ.

## ಸಚಿವರ ಪ್ರವಾಸ ರದ್ದು

ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):

ವಸತಿ ಸಚಿವ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರ ಜುಲೈ 14 ರ ತುಮಕೂರು ಜಿಲ್ಲೆಯ ಪ್ರವಾಸ ಅನಿವಾರ್ಯ ಕಾರಣಗಳಿಂದ ರದ್ದಾಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ):

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರಾದ ಜಗದೀಶ ಶೆಟ್ಟರ ಅವರು ಜುಲೈ 11 ರಂದು ಬೆಳಗಾವಿ ಹಾಗೂ ಹುಬ್ಬಳ್ಳಿ–ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.